

ಆಲೋಚನೆ ಸ್ಪಷ್ಟವಾಯಿತು, ನಿರ್ಧಾರ ಗಟ್ಟಿಯಾಯಿತು. ಮುಂದೆ ಹೆಜ್ಜೆಯಿಟ್ಟೆ.

ಮೊದಲಿಗೆ ಜ್ಞಾನಕ್ಕಾಗಿ ಸರ್ಪದ ಮುಂದೆ ನಿಲ್ಲಬೇಕು. ನನ್ನ ಹೆಜ್ಜೆ ಸಪ್ಪಳಕ್ಕೇ ಅದು ಎಚ್ಚರಗೊಂಡಿತು. ಮೊದಲಿಗೆ ತಲೆಯನ್ನು ಮಾತ್ರ ಮೇಲೆತ್ತಿ ನನ್ನನ್ನು ನೋಡಿದ ಅದು ನನ್ನ ಕೋರಿಕೆಯನ್ನರಿತಂತೆ ಮರದಿಂದಿಳಿದು ಸರಸರನೆ ನನ್ನತ್ತ ಹರಿದುಬರತೊಡಗಿತು. ಅದರ ಬಾಯಿಯಲ್ಲಿ ಕಂಡದ್ದು ಬಳುಕಾಡುತ್ತಿದ್ದ ಎರಡು ನಾಲಿಗೆಗಳಷ್ಟೇ. ವಿಷದ ಹಲ್ಲುಗಳಲ್ಲ. ನನಗೆ ಸಮಾಧಾನ. ಅದರತ್ತ ಓಡಿದೆ.

ಹತ್ತಿರಾದಂತೆ ಸರ್ಪದ ನಡೆಯೇ ಬದಲಾಗಿಬಿಟ್ಟಿತು. ಅದು ಹೊರಡಿಸಿದ ಭಯಂಕರ "ಹಿಸ್" ಸದ್ದಿಗೆ ನಾನು ಹೆದರಿ ಕಂಗಾಲಾದೆ. ಅದರ ದಿಕ್ಕನ್ನು ತೊರೆದು ಇನ್ನೆತ್ತಲೋ ಓಡಿದೆ. ಆದರೆ, ಬೆನ್ನ ಹಿಂದೆ ಸರ್ಪದ ಬುಸುಗುಟ್ಟುವಿಕೆ ಕೇಳಿಸಿತು, ಅದು ಕ್ಷಣಕ್ಷಣಕ್ಕೂ ತಾರಕಕ್ಕೇರುತ್ತಿತ್ತು. ನನ್ನ ಜಗತ್ತು ಬದಲಾಗಿಹೋಗಿತ್ತು.

ನನ್ನತ್ತ ವೇಗವಾಗಿ ಬಂದ ಸರ್ಪ ನನ್ನ ಕಾಲುಗಳಿಗೆ ಸಂಕೋಲೆಯಾಗಿ ಸುತ್ತಿಕೊಂಡಿತು. ಯಮಬಿಗಿತ ಅದು. ನಾನು ಧೊಪ್ಪನೆ ಕೆಳಗೆ ಬಿದ್ದೆ.

ನನ್ನ ಜೀವಮಾನದ ಅತಿ ದೊಡ್ಡ ಅಪಾಯ ಇದು. ಆದರೆ, ನಾನು ಬದುಕಲೇಬೇಕಿತ್ತು. ಅದಕ್ಕಾಗಿ ತಪ್ಪಿಸಿಕೊಳ್ಳಲೇಬೇಕಿತ್ತು. ಅದಕ್ಕೀಗ ಒಂದೇ ದಾರಿ. ಅದು ನಾಯಿ.

ಸಹಸ್ರ ಸಹಸ್ರ ವರ್ಷಗಳಿಂದಲೂ ಮನುಷ್ಯ ಸಂಗಾತಿ, ಸರ್ಪದ ಶತ್ರುವಾಗಿರುವ ನಾಯಿಗೆ ನನ್ನೀ ಸಂಕಷ್ಟ ಕಾಣಬೇಕು. ಆಗ ಅದು ಸರ್ಪದ ಮೇಲೆ ಖಂಡಾಂತರ ಕ್ಷಿಪಣಿಯಂತೆ ಎರಗುತ್ತದೆ, ಕ್ಷಣಾರ್ಧದಲ್ಲಿ ಸರ್ಪವನ್ನು ತುಂಡು ತುಂಡು ಮಾಡಿ ಒಗೆದುಬಿಡುತ್ತದೆ. ಅದರ ಕೋರೆಹಲ್ಲುಗಳ ಮುಂದೆ ಸರ್ಪದ ಆಟವೆಂದೂ ನಡೆಯದು.

ಈ ಆಲೋಚನೆಯೆ ನನ್ನಲ್ಲಿ ಅಪರಿಮಿತ ಧೈರ್ಯೋತ್ಸಾಹ ಮೂಡಿಸಿತು. ನರನಾಡಿ,